# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)
## ಕರ್ನಾಟಕ

**ಮಾನ್ಯ ಸಂಪಾದಕರೆ, ಮಾಧ್ಯಮ ಪ್ರತಿನಿಧಿಗಳೆ,**

**ಕ್ರಾಂತಿಕಾರಿ ಶುಭಾಶಯಗಳು.**

ಹೊಗೆನಕಲ್ ಯೋಜನೆ ವಿಚಾರದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಹಿನ್ನಲೆಯಲ್ಲಿ ನಮ್ಮ ನಿಲುವನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದನ್ನು ಪರಿಗಣಿಸಿ ಮಾಧ್ಯಮಗಳಲ್ಲಿ ಪ್ರಕಟಿಸಬೇಕೆಂದು ಈ ಮೂಲಕ ಕೋರುತ್ತಿದ್ದೇವೆ.

**ಹೋರಾಟದಲ್ಲಿ ತಮ್ಮೊಂದಿಗೆ,**

**ಗಂಗಾಧರ್**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**5 ಮಾರ್ಚ್, 2008**

ತಮಿಳುನಾಡಿನ ಕರುಣಾನಿಧಿ ಸರ್ಕಾರ 1998ರಲ್ಲೇ ಒಪ್ಪಂದವಾದ ಕುಡಿಯುವ ನೀರಿನ ಯೋಜನೆಯೆಂದು ಹೊಗೆನಕಲ್ ಯೋಜನೆಯನ್ನು ಕೈಗೆತ್ತಿಕೊಂಡ ಹಿನ್ನಲೆಯಲ್ಲಿ ವಿವಾದ ಮತ್ತೊಮ್ಮೆ ಮುನ್ನೆಲೆಗೆ ಬಂದಿತು. ಬಿಜೆಪಿಯ ಯಡಿಯೂರಪ್ಪ ಇದರ ಪೂರ್ಣ ಲಾಭ ಪಡೆದುಕೊಳ್ಳಲು ಸಂಚು ರೂಪಿಸಿದರು. ಕರ್ನಾಟಕದಲ್ಲಿ ಬೆಂಗಳೂರು ಕೇಂದ್ರಬಿಂದುವಾಗಿ ಪ್ರತಿಭಟನೆಗಳು, ಭಾಷಾ ಅಲ್ಪಸಂಖ್ಯಾತರ ಮೇಲೆ ದಾಳಿಗಳು, ಅವರ ಆಸ್ತಿಪಾಸ್ತಿ ನಾಶಗಳು ನಡೆದವು. ತಮಿಳುನಾಡಿನಲ್ಲಿಯೂ ಅಲ್ಲಿನ ಭಾಷಾ ಅಲ್ಪಸಂಖ್ಯಾತರ ಮೇಲೆ ದಾಳಿಗಳು ಆಸ್ತಿಪಾಸ್ತಿ ನಾಶಗಳು ನಡೆದವು. ನಂತರ ಈ ವಿವಾದದಲ್ಲಿ ಕನ್ನಡ ಚಿತ್ರೋದ್ಯಮಿಗಳು, ತಮಿಳು ಚಿತ್ರೋದ್ಯಮಿಗಳು ಸೇರಿಕೊಂಡರು.

ತಮಿಳುನಾಡಿನ ಕರುಣಾನಿಧಿ ವಿಧಾನಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳುವಂತೆ ಮಾಡಿ ತನ್ನ ರಾಜಕೀಯ ಬೇಳೆ ಪೂರ್ಣವಾಗಿ ಬೇಯಿಸಿಕೊಳ್ಳಲು ಪ್ರಯತ್ನಿಸಿದರು.

ಈ ಹಿಂದೆ ತಮಿಳುನಾಡಿಗೆ ಒಂದು ಹನಿ ನೀರು ಬಿಡುವುದಿಲ್ಲ ಎಂಬಂತೆ ಮಾತನಾಡಿದ ಕರ್ನಾಟಕದ ಎಸ್.ಎಂ. ಕೃಷ್ಣ ಮುಂಬರುವ ಚುನಾವಣೆಯ ಸಂದರ್ಭದಲ್ಲಿ ತನ್ನ ನಾಯಕತ್ವ ಮತ್ತು ಅಧಿಕಾರ ಸದೃಢೀಕರಿಸಿಕೊಳ್ಳಲು ಮುತ್ಸದ್ದಿಯಂತೆ ಪೋಸು ನೀಡುತ್ತಾ, ಹೇಳಿಕೆಗಳನ್ನು ಕೊಡುತ್ತಾ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಎಲ್ಲಾ ಪ್ರಯತ್ನ ನಡೆಸಿದರು.

ಎರವಲು ಕಥೆಗಳು, ರಿಮೇಕ್‌ಗಳನ್ನೇ ಪ್ರಧಾನ ಕಾಯಕವಾಗಿ ಮಾಡಿಕೊಂಡು ಸ್ವಂತಿಕೆ ಹಾಗೂ ಸೃಜನಶೀಲತೆಗಳನ್ನೇ ಕಳೆದುಕೊಂಡು ಕನ್ನಡಿಗರ ಕಡೆಗಣನೆಗೆ ತುತ್ತಾಗಿ ಮಾರುಕಟ್ಟೆ ಕಳೆದುಕೊಳ್ಳುತ್ತಿರುವ (ಕೆಲವನ್ನು ಹೊರತುಪಡಿಸಿ) ಕನ್ನಡ ಚಿತ್ರರಂಗದ ಉದ್ದಿಮೆಪತಿಗಳು ಈ ವಿವಾದವನ್ನು ಬಳಸಿಕೊಂಡು ತಮಿಳು ಚಿತ್ರೋದ್ಯಮಿಗಳ ವಿರುದ್ಧ ಕನ್ನಡಿಗರನ್ನು ಎತ್ತಿಕಟ್ಟಲು ಪ್ರಯತ್ನಿಸಿದರು. ತಮಿಳು ಚಿತ್ರಗಳ ನಿರ್ಬಂಧಕ್ಕೆ ತಮಿಳು ಟಿ.ವಿ. ವಾಹಿನಿಗಳ ನಿರ್ಬಂಧಕ್ಕೆ ಪ್ರಯತ್ನಿಸಿದರು. ಆ ಮೂಲಕ ತಮ್ಮ ಮಾರುಕಟ್ಟೆ ಬೆಳೆಸಿಕೊಳ್ಳಲು ಪ್ರಯತ್ನಿಸಿದರು. ಇದಕ್ಕೆ ಎದಿರಾಗಿ ತಮಿಳು ಚಿತ್ರೋದ್ಯಮಿಗಳು ತಮಿಳರನ್ನು ಕನ್ನಡಿಗರ ವಿರುದ್ಧ ಎತ್ತಿಕಟ್ಟಿ ತಮ್ಮ ಮಾರುಕಟ್ಟೆ ಹಿತಾಸಕ್ತಿ ಕಾಪಾಡಿಕೊಳ್ಳಲು ಪ್ರಯತ್ನಿಸಿದರು.

ಕನ್ನಡ ಸಂಘಟನೆಗಳ ಕೆಲವು ನಾಯಕರುಗಳು ಕನ್ನಡ ಚಿತ್ರರಂಗದ ಉದ್ದಿಮೆಪತಿಗಳ ದಾಳಗಳಂತೆ ಕಾರ್ಯನಿರ್ವಹಿಸುತ್ತಾ ದುರಭಿಮಾನವನ್ನು ಬೆಳೆಸುತ್ತಾ ಭಾಷಾ ಅಲ್ಪಸಂಖ್ಯಾತರ ಮೇಲೆ ಜನಸಾಮಾನ್ಯರನ್ನು ಎತ್ತಿಕಟ್ಟುತ್ತಿದ್ದಾರೆ. ದಾಳಿಗಳನ್ನು ಸಂಘಟಿಸುತ್ತಾ ಭಾಷಾ ಅಲ್ಪಸಂಖ್ಯಾತರ ಆಸ್ತಿಪಾಸ್ತಿಗಳನ್ನು ನಾಶ ಮಾಡುತ್ತಾ ಅವರು ಆತಂಕದಿಂದ ಬದುಕುವಂತೆ ಮಾಡುತ್ತಿದ್ದಾರೆ. ಇದೇ ರೀತಿಯ ಕೆಲಸಗಳು ತಮಿಳುನಾಡಿನಲ್ಲಿಯೂ ನಡೆಯುತ್ತಿವೆ.

ವಿವಾದವನ್ನು ತಾರಕಕ್ಕೇರಿಸಿ ದುರಭಿಮಾನಿ ವಾಕ್‌ಸಮರ, ದಾಳಿ ಪ್ರತಿದಾಳಿಗಳನ್ನು ಮಾಡಿ ಕನ್ನಡಿಗರು ಹಾಗೂ ತಮಿಳರನ್ನು ದಾರಿ ತಪ್ಪಿಸಲು ಮಾಡಿದ ಪ್ರಯತ್ನಗಳ ನಂತರ ಕೇಂದ್ರ ಸರ್ಕಾರ, ಕರುಣಾನಿಧಿ, ಎಸ್.ಎಂ. ಕೃಷ್ಣ ಮೊದಲಾದವರೆಲ್ಲಾ ಸೇರಿಕೊಂಡು ಹೊಗೆನಕಲ್ ಯೋಜನೆಯನ್ನು ಕರ್ನಾಟಕದಲ್ಲಿ ಹೊಸ ಸರ್ಕಾರ ಬರುವವರೆಗೆ ತಡೆಹಿಡಿದಿದ್ದಾರೆ. ಇದು ಕಾಂಗ್ರೆಸ್ ಪಕ್ಷ ಹಾಗೂ ಡಿಎಂಕೆ ಪಕ್ಷದ ಸ್ವಾರ್ಥಪೂರಿತ ಚುನಾವಣಾ ಹೊಂದಾಣಿಕೆ ಅಲ್ಲದೆ ಬೇರೇನೂ ಅಲ್ಲ.

ಯಾವುದೇ ರೀತಿಯ ದುರಭಿಮಾನ ಅಭಿಮಾನವನ್ನು ನುಂಗುತ್ತದೆ. ಅದು ಜನರ ಹಿತಾಸಕ್ತಿಗೆ ವಿರುದ್ಧವಾಗುತ್ತದೆ. ಆಳುವ ಜನಗಳ, ಅವರ ರಾಜಕೀಯ ಸ್ವಾರ್ಥ ಹಿತಾಸಕ್ತಿಗಳಿಗೆ ಪೂರಕವಾಗುತ್ತದೆ. ಇದನ್ನು ಎಲ್ಲಾ ಕನ್ನಡಿಗರು ತಮಿಳರು ಸರಿಯಾಗಿ ಗ್ರಹಿಸಿ ಸ್ವಾರ್ಥಿ ಹಾಗೂ ಕ್ರೂರ ಆಳುವ ಜನಗಳ ದಾಳಗಳಾಗದಂತೆ ತಮ್ಮನ್ನು ತಾವು ನೋಡಿಕೊಳ್ಳಬೇಕಾಗಿದೆ.

ನಡೆದ ವಿದ್ಯಮಾನಗಳನ್ನು ಅವಲೋಕಿಸಿದರೆ ಕರುಣಾನಿಧಿ, ಯಡಿಯೂರಪ್ಪ, ಎಸ್.ಎಂ. ಕೃಷ್ಣ, ಕೆಲವು ಕನ್ನಡ ಸಂಘಟನೆಗಳ ನಾಯಕರುಗಳು, ಚಿತ್ರೋದ್ಯಮಿಗಳು, ರಾಜಕೀಯ ಪಕ್ಷಗಳು ಹಾಗೂ ಕೇಂದ್ರ ಸರ್ಕಾರ ಇವರ್‍ಯಾರಿಗೂ ಜನರ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ, ಕನ್ನಡ ಹಾಗೂ ತಮಿಳು ಜನಸಾಮಾನ್ಯರ, ರೈತರ ಹಿತಾಸಕ್ತಿ ಕಾಪಾಡುವ ಪ್ರಾಮಾಣಿಕ ಕಾಳಜಿ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಕನ್ನಡ ನಾಡಿನ ಹಾಗು ತಮಿಳುನಾಡಿನ ಜನರನ್ನು, ನೆಲ ಜಲಗಳನ್ನು ಕಾಪಾಡುವ ಉದ್ದೇಶವೂ ಇಲ್ಲವೆಂಬುದು ಎದ್ದುಕಾಣುತ್ತದೆ. ತಮ್ಮತಮ್ಮ ರಾಜಕೀಯ ಹಾಗೂ ಲೂಟಿಗಾಗಿ ಕನ್ನಡ ಹಾಗೂ ತಮಿಳು ಜನಸಾಮಾನ್ಯರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ. ಕನ್ನಡ ನಾಡಿನ ಹಾಗೂ ತಮಿಳುನಾಡಿನ ಜನರ ಮೇಲೆ, ನೆಲ ಜಲಗಳ ಮೇಲೆ ಮಾರಕ ದಾಳಿ ಮಾಡುತ್ತಾ, ಹಗಲು ದರೋಡೆ ಮಾಡುತ್ತಿರುವ ಸಾಮ್ರಾಜ್ಯಶಾಹಿ ಬಹುರಾಷ್ಟ್ರೀಯ ಕಂಪೆನಿಗಳು, ರಿಲಯನ್ಸ್, ಮಹೀಂದ್ರಾದಂತಹ ದಲ್ಲಾಳಿ ಕಂಪೆನಿಗಳು ಹಾಗೂ ಅವರ ಬಾಲಗಳಾಗಿರುವ ದೊಡ್ಡದೊಡ್ಡ ಭೂಹಿಡುವಳಿದಾರರು, ರಾಜಕೀಯ ಪಕ್ಷಗಳು, ಕೇಂದ್ರಾಧಿಪತ್ಯ ಮೊದಲಾದ ಜನಸಾಮಾನ್ಯರ ಶತೃಗಳ ವಿರುದ್ಧ ಮಾತನಾಡದೆ ಅವರ ವಿರುದ್ಧ ಹೋರಾಟ ರೂಪಿಸದೇ ರಾಷ್ಟ್ರೀಯ ಹಿತಾಸಕ್ತಿಯನ್ನಾಗಲಿ ನಾಡಿನ ಹಿತಾಸಕ್ತಿಯನ್ನಾಗಲೀ ಕಾಪಾಡಲು ಸಾಧ್ಯವೇ ಇಲ್ಲ. ಇದಕ್ಕೆ ಹೊರತಾಗಿ ಕರುನಾಡಿನ ಜನರಿಗೆ ಭಾಷೆ, ನೆಲ, ಜಲಗಳಿಗೆ ಕುತ್ತುಂಟು ಮಾಡುತ್ತಿರುವವರು ತಮಿಳು ಭಾಷಿಗರೆಂದೂ, ತಮಿಳುನಾಡಿನ ಜನರಿಗೆ ಭಾಷೆ, ನೆಲ, ಜಲಗಳಿಗೆ ಕುತ್ತುಂಟು ಮಾಡುತ್ತಿರುವವರು ಕನ್ನಡ ಭಾಷಿಗರು ಎಂದು ಪ್ರತಿಪಾದಿಸುವವರು ಸಾರಾಂಶದಲ್ಲಿ ಲೂಟಿಕೋರ ಆಳುವ ಜನಗಳ ಪರವಾಗಿ ಮಾತಾಡುತ್ತಾ ಅದರಂತೆ ಕಾರ್ಯಾಚರಿಸುತ್ತಿದ್ದಾರೆಂದೇ ಗ್ರಹಿಸಬೇಕು. ಅದಕ್ಕಾಗಿ ಜನಸಾಮಾನ್ಯರನ್ನು ಪರಸ್ಪರ ಎತ್ತಿಕಟ್ಟುತ್ತಾ ಜನರ ನಿಜವಾದ ಶತೃಗಳನ್ನು ರಕ್ಷಿಸುತ್ತಿದ್ದಾರೆಂದೇ ಅರ್ಥ ಮಾಡಿಕೊಳ್ಳಬೇಕು.

ಕನ್ನಡ ನಾಡಿನ ಹಾಗೂ ತಮಿಳು ನಾಡಿನ ಜನಸಾಮಾನ್ಯರು, ರೈತಾಪಿಗಳು, ಪ್ರಜಾತಂತ್ರವಾದಿಗಳು, ಜನಪರ ಸಂಘಟನೆ ಹಾಗೂ ವ್ಯಕ್ತಿಗಳು ಈ ನಿಟ್ಟಿನಲ್ಲಿ ಯೋಚಿಸಿ ಜನರ ಮಧ್ಯೆ ಕೆಲಸ ಮಾಡಬೇಕೆಂದು ನಾವು ಈ ಮೂಲಕ ಕೋರುತ್ತಿದ್ದೇವೆ.

* ತಮಿಳು ನಾಡಿನ ಜನರಿಗೆ ಕುಡಿಯುವ ನೀರಿನ ಸಮಸ್ಯೆಯನ್ನು ಎರಡೂ ರಾಜ್ಯಗಳ ಜನಸಾಮಾನ್ಯರ ಒಪ್ಪಿಗೆಯೊಂದಿಗೆ ಮಾತುಕತೆ ಮೂಲಕ ಬಗೆಹರಿಸಬೇಕು. ಇದಕ್ಕಾಗಿ ಆಯಾ ಪ್ರದೇಶದ ಜನಪರ ಸಂಘಟನೆಗಳು ಹಾಗೂ ವ್ಯಕ್ತಿಗಳು ಸೇರಿಕೊಂಡು ನೇರ ಮಾತುಕತೆ ನಡೆಸಿ ಆಯಾ ಪ್ರದೇಶದ ಜನರ ಹಿತಾಸಕ್ತಿಗಳಿಗೆ ಮಾರಕವಾಗದಂತೆ ಕುಡಿಯುವ ನೀರಿನ ಯೋಜನೆ ತಯಾರಿಸಬೆಕು. ಇದರಲ್ಲಿ ಯಾವುದೇ ರಾಜಕೀಯ ಪಕ್ಷಗಳ ಪದಾಧಿಕಾರಿಗಳು ಇರಕೂಡದು. ಹೀಗೆ ಮಂಡಿಸಿದ ಯೋಜನೆಯನ್ನು ಎರಡೂ ರಾಜ್ಯಗಳ ಸರ್ಕಾರಗಳು ಜನರು ಒಪ್ಪಿದ ಯೋಜನೆಯೆಂದು ಮಾನ್ಯತೆ ನೀಡಿ ಜಾರಿಗೊಳಿಸಬೇಕು. ಸರ್ಕಾರ ಈ ರೀತಿ ಮಾಡಲು ಎರಡೂ ರಾಜ್ಯಗಳ ಜನಸಾಮಾನ್ಯರು, ಜನಪರ ಸಂಘಟನೆಗಳು, ವ್ಯಕ್ತಿಗಳು, ಪ್ರಜಾತಂತ್ರವಾದಿಗಳು ಒತ್ತಡ ಹೇರಬೇಕು. ಎರಡೂ ರಾಜ್ಯಗಳ ಆಯಾ ಭಾಗದ ಜನಸಾಮಾನ್ಯರೆಲ್ಲಾ ಒಗ್ಗಟ್ಟಾಗಿ ಈ ಸಮಸ್ಯೆಯನ್ನು ಬಗೆಹರಿಸಲು ಒಂದಾಗಬೇಕು. ಬದಲಾಗಿ ಚಿತ್ರೋದ್ಯಮಿಗಳು, ಸಿನಿಮಾ ನಾಯಕರುಗಳು ರಾಜಕೀಯ ನಾಯಕರುಗಳು ಈ ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಬದಲಾಗಿ ಇದನ್ನು ಬಳಸಿಕೊಂಡು ತಮ್ಮತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುತ್ತಾರೆ ಎಂಬುದನ್ನು ಗ್ರಹಿಸಿ ಜವಾಬ್ದಾರಿ ವಹಿಸಬೇಕಾಗಿದೆ.

* ಹೊಗೇನಕಲ್ ಯೋಜನೆ ನೆಪದಲ್ಲಿ ದುರಭಿಮಾನ ಬೆಳೆಸಲು ಯತ್ನಿಸಿ, ಭಾಷಾ ಅಲ್ಪಸಂಖ್ಯಾತರ ಮೇಲೆ ಮತ್ತರ ಆಸ್ತಿಪಾಸ್ತಿಗಳ ಮೇಲೆ ನಡೆದ ದಾಳಿಗಳನ್ನು ಹಾಗೂ ಇದನ್ನು ಪ್ರಚೋದಿಸಿ ಸಂಘಟಿಸಿದ ರಾಜಕೀಯ ಹಾಗೂ ಇನ್ನಿತರ ನಾಯಕರುಗಳ ಕೃತ್ಯಗಳನ್ನು ನಾವು ಖಂಡಿಸುತ್ತಿದ್ದೇವೆ.

* ಕನ್ನಡ ನಾಡಿನ ಹಾಗೂ ತಮಿಳುನಾಡಿನ ಜನಸಾಮಾನ್ಯರು, ಜನಪರ ಪ್ರಜಾತಾಂತ್ರಿಕ ಶಕ್ತಿಗಳು ಒಗ್ಗೂಡಿ ತಮ್ಮ ನಾಡು, ನುಡಿ, ನೆಲ, ಜಲಗಳ ರಕ್ಷಣೆಗಾಗಿ ಬಹುರಾಷ್ಟ್ರೀಯ ಕಂಪೆನಿಗಳು, ದಲ್ಲಾಳಿ ಕಂಪೆನಿಗಳು, ಕೇಂದ್ರಾಧಿಪತ್ಯ, ಮತ್ತವರಿಗೆ ಬೆಂಬಲವಾಗಿರುವ ಶಕ್ತಿಗಳ ವಿರುದ್ಧ ಬಲಿಷ್ಠ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕೋರುತ್ತಿದ್ದೇವೆ.

**ಕ್ರಾಂತಿಕಾರಿ ವಂದನೆಗಳೊಂದಿಗೆ,**

**ಗಂಗಾಧರ್**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ ಮಾವೋವಾದಿ**
**ಕರ್ನಾಟಕ**

**5 ಮಾರ್ಚ್, 2008**